# ಎಲ್ಲರ ತಾಯಿ ಸಾವಿತ್ರಿಬಾಯಿ

‘ಅಕ್ಷರದವ್ವ’ ಸಾವಿತ್ರಿಬಾಯಿ ಹಚ್ಚಿದ ಶಿಕ್ಷಣದ ಜ್ಯೋತಿ ಈಗ ದೇಶದೆಲ್ಲೆಡೆ ಜ್ವಾಜಲ್ಯಮಾನ. ಸಾವಿತ್ರಿ ಅವರ ನೆನಪು ಸಮಾನ ಸಮಾಜದ ಸಾಕಾರಣಕ್ಕೆ ಪ್ರೇರಕ, ಪೂರಕ.

■ ರಘು ಗಂಕಾರನಹಳ್ಳಿ



ಬೀದರ್‌ನ ‘ಸರಸ್ವತಿ ಶಾಲೆ’ಯ ಚಿತ್ರಕಲಾ ಶಿಕ್ಷಕಿ ಸಂಗೀತಾ ದುನಗೆ ಅವರ ರಂಗೋಲಿಕಲೆಯಲ್ಲಿ ಸಾವಿತ್ರಿಬಾಯಿ ಫುಲೆ

ಮಹಾರಾಷ್ಟ್ರದ ಸಾವಿತ್ರಿಬಾಯಿ ಫುಲೆ (ಜ: 1831ರ ಜನವರಿ 3), ಭಾರತದಲ್ಲಿ ಸ್ತ್ರೀಶಿಕ್ಷಣಕ್ಕೆ ಮುನ್ನುಡಿ ಬರೆದ ಮಹಾತಾಯಿ.

ಸಾವಿತ್ರಿಬಾಯಿ ಅವರು ತಮ್ಮ ಒಂಬತ್ತನೇ ವಯಸ್ಸಿನಲ್ಲೇ ವಿವಾಹದ ಬಂಧಕ್ಕೆ ಒಳಗಾದರು. ಬಾಲ್ಯವಿವಾಹ ಅವರ ಬದುಕನ್ನು ಮುರುಟಿಸಲಿಲ್ಲ. ಜ್ಯೋತಿಬಾ ಫುಲೆ ಅವರ ಸಾಂಗತ್ಯ ಸಾವಿತ್ರಿಬಾಯಿ ಅವರನ್ನು ಸಮಾಜಸೇವೆಯ ಮಾರ್ಗದಲ್ಲಿ ಮುನ್ನಡೆಸಿತು. ಶಿಕ್ಷಕ ತರಬೇತಿ ಪಡೆದ ಅವರು, ಸ್ತ್ರೀಶಿಕ್ಷಣಕ್ಕೆ ಹೆಚ್ಚಿನ ಒತ್ತು ಕೊಟ್ಟರು. ಪ್ರತಿಕೂಲ ಸನ್ನಿವೇಶದಲ್ಲೂ ಹುಡುಗಿಯರಿಗೆ ಅಕ್ಷರದ ಸಖ್ಯ ಒದಗಿಸಿಕೊಟ್ಟು, ‘ಅಕ್ಷರದವ್ವ’ ಎನ್ನಿಸಿಕೊಂಡರು.

ಸಾವಿತ್ರಿಬಾಯಿ ಅವರು ದೇಶದ ಮೊದಲ ಶಿಕ್ಷಕಿಯೆಂಬ ಹೆಗ್ಗಳಿಕೆ ಪಡೆಯುವುದರಲ್ಲಿ ಜ್ಯೋತಿಬಾ ಅವರ ಪಾತ್ರ ಬಲು ದೊಡ್ಡದು. ಜ್ಯೋತಿಬಾ ಅವರು ಪತ್ನಿಯನ್ನು ಸಾಕ್ಷರರನ್ನಾಗಿಸುವುದರ ಜೊತೆಗೆ, ಶಿಕ್ಷಕ ತರಬೇತಿ ಕೊಡಿಸಿ, ಪಾಠ ಹೇಳಲು ಹುರಿದುಂಬಿಸಿದರು.

ಸಾವಿತ್ರಿಬಾಯಿ ಅವರ ಶಿಕ್ಷಕ ವೃತ್ತಿ ಹೂವಿನ ಹಾಸೇನೂ ಆಗಿರಲಿಲ್ಲ. ಮೊದಲ ವಿರೋಧ ಕುಟುಂಬದೊಳಗಿನಿಂದಲೇ ಎದುರಾಯಿತು. ಪ್ರಗತಿಪರ ಚಿಂತನೆಗಳ ಫುಲೆ ದಂಪತಿಯನ್ನು ಮನೆಯಿಂದ ಹೊರಹಾಕಲಾಯಿತು. ಇದರಿಂದ ಎದೆಗುಂದದ ದಂಪತಿ, ಪುಣೆಯಲ್ಲಿ ಉಸ್ಮಾನ್ ಶೇಖ್ ಅವರ ವಾಡಾದಲ್ಲಿ ವಯಸ್ಕರ ಶಿಕ್ಷಣ ಕೇಂದ್ರವನ್ನು, ಪ್ರಪ್ರಥಮವಾಗಿ 1849ರಲ್ಲಿ ಆರಂಭಿಸಿದರು. ಅಲ್ಲಿಂದ ಮುಂದೆಲ್ಲ ಅಕ್ಷರದ ಹಾದಿ.

ಫುಲೆ ದಂಪತಿಯ ಅಕ್ಷರ ದಾಸೋಹದ ಕಾಯಕಕ್ಕೆ ಬೆಂಬಲವಾಗಿ ನಿಂತವರು ಉಸ್ಮಾನ್ ಶೇಖ್ ಮತ್ತು ಫಾತಿಮಾ ಶೇಖ್. ಇಂದು ನಾವೆಲ್ಲರೂ ಪಾಕಿಸ್ತಾನದ ಮಲಾಲಾ ಯೂಸುಫ್ ಅವರ ಸಾಧನೆಯ ಬಗ್ಗೆ ಮಾತನಾಡುತ್ತೇವೆ. ಆದರೆ, 19ನೇ ಶತಮಾನದಲ್ಲಿಯೇ ಭಾರತದಲ್ಲಿ ಔಪಚಾರಿಕ ಶಿಕ್ಷಣ ಪಡೆದು ಸುಶಿಕ್ಷಿತರಾಗಿ, ಸಾವಿತ್ರಿಯವರಿಗೆ ಹೆಗಲು ಕೊಟ್ಟು ದುಡಿದ ಫಾತಿಮಾ ಶೇಖ್ ಅವರನ್ನು ನೆನಪಿಸಿಕೊಳ್ಳಬೇಕು. ದೇಶದ ಮೊದಲ ಮುಸ್ಲಿಂ ಶಿಕ್ಷಕಿ ಎನ್ನುವ ಕೀರ್ತಿ ಫಾತಿಮಾ ಅವರದು.

ಫುಲೆ ಹಾಗೂ ಶೇಖ್ ದಂಪತಿ ಸಮಾಜದ ಜಾಗೃತಪ್ರಜ್ಞೆಯ ಸಂಕೇತಗಳೆನಿಸಿದ್ದಾರೆ. ಭಾಷೆ ತಿಳಿದಿದ್ದರೂ ಅಕ್ಷರ ಜ್ಞಾನದ ಅರಿವಿಲ್ಲದ ದಲಿತ–ಶೂದ್ರರಲ್ಲಿ ಅಕ್ಷರ ಬೀಜ ಬಿತ್ತಿ, ‘ಶಿಕ್ಷಣ ಮಹಿಳೆಯರ ಹಕ್ಕು’ ಎಂಬುದನ್ನು ಪ್ರತಿಪಾದಿಸಿದ ಅವರ ಸಾಧನೆ ಅಸಾಧಾರಣವಾದುದು.

ಸಾವಿತ್ರಿಬಾಯಿ ಅವರು ಶಾಲೆಗೆ ಹೋಗುವ ದಾರಿಯಲ್ಲೂ ಪ್ರತಿರೋಧ ಎದುರಿಸಬೇಕಾಯಿತು. ಅವರು ಶಾಲೆಗೆ ಹೋಗದಂತೆ ತಡೆಯಲು ದಾರಿಯಲ್ಲಿ ಕೆಲವರು ಸಗಣಿ–ಕಲ್ಲು ಎಸೆಯುತ್ತಿದ್ದರು. ಚೀಲದಲ್ಲಿ ಒಂದು ಸೀರೆ ಇಟ್ಟುಕೊಂಡು ಹೋಗುತ್ತಿದ್ದ ಅವರು, ಶಾಲೆಗೆ ಹೋದ ನಂತರ ಸೀರೆ ಬದಲಿಸಿ ಪಾಠ ಮಾಡುತ್ತಿದ್ದರು.

ಇಂದು ವಿದ್ಯಾರ್ಥಿಗಳನ್ನು ಉತ್ತೇಜಿಸಲು ನೀಡಲಾಗುತ್ತಿರುವ ವಿದ್ಯಾರ್ಥಿವೇತನ, ಹಾಸ್ಟೆಲ್ ವ್ಯವಸ್ಥೆ, ಶಿಶು ಆರೈಕೆ ಕೇಂದ್ರ ಹಾಗೂ ವಿಧವಾ ಮಹಿಳೆಯರ ರಕ್ಷಣೆಯಂಥ ಕಾರ್ಯಕ್ರಮಗಳನ್ನು 19ನೇ ಶತಮಾನದಲ್ಲಿಯೇ ಫುಲೆ ದಂಪತಿ ‘ಸತ್ಯಶೋಧಕ ಸಮಾಜ’ದ ಮೂಲಕ ಕೈಗೊಂಡಿದ್ದರು. ಅವರ ಸಮಾಜಸೇವೆ ಬ್ರಿಟಿಷರ ಮೆಚ್ಚುಗೆಗೆ ಪಾತ್ರವಾಗಿತ್ತು. ವಿವಾಹ ಪದ್ಧತಿಯನ್ನು ಪುರೋಹಿತರ ನೆರವಿಲ್ಲದೆ ನಡೆಸುತ್ತಿದ್ದರು. ಜ್ಯೋತಿಬಾ ಅವರ ಅಂತ್ಯಸಂಸ್ಕಾರವನ್ನು ತಾವೇ ಮಾಡುವ ಮೂಲಕ ಸಾವಿತ್ರಿಬಾಯಿ ಅವರು ವೈಚಾರಿಕತೆಯನ್ನು ಎತ್ತಿಹಿಡಿದಿದ್ದರು.

ಸಾವಿತ್ರಿಬಾಯಿ ಅವರ ವ್ಯಕ್ತಿತ್ವ ಹಾಗೂ ಸಾಧನೆ ಎಲ್ಲ ಕಾಲದ ಮಹಿಳೆಯರಿಗೆ ಸ್ಫೂರ್ತಿದಾಯಕ. ಸಮಾನ ಸಮಾಜದ ಸಾಕಾರಕ್ಕೆ ಅವರು ತೋರಿದ ಮಾರ್ಗ ಅನುಕರಣೀಯ.

ಪ್ರತಿಕ್ರಿಯಿಸಿ: feedback@sudha.co.in


